ನಿಯಮ ೬೮ರ ಮೇರೆಗೆ

ಪ್ರಸ್ತಾಪಿಸಿದ ವಿಚಾರಕ್ಕೆ ಮಂತ್ರಿಗಳಿಂದ ಉತ್ತರ

ಪ್ರವಾಸೋದ್ಯಮ ನಿಗಮದಲ್ಲಿ ನಡೆಯಿತೆನ್ನಲಾದ ಕೆಲವು ಅವ್ಯವಹಾರಗಳು

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು):— ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಸದಸ್ಯರಾದ ಬಿ. ಲಕ್ಕಪ್ಪನವರು ಕರ್ನಾಟಕ ಪ್ರವಾಸೋದ್ಯಮ ನಿಗಮದಲ್ಲಿ ಕೆಲವು ಅವ್ಯವಹಾರಗಳು ನಡೆದಿದೆ ಎಂದು ಆಪಾದನೆ ಮಾಡಿ ನಿಯಮ ೬೮ರ ಪ್ರಕಾರ ಪ್ರಸ್ತಾಪ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಾನು ಅನಿವಾರ್ಯವಾಗಿ ಬೇರೆಕಡೆಗೆ ಹೋಗಬೇಕಾದ ಸಂದರ್ಭವಿದ್ದುದರಿಂದ ಅವರು ಮಾತನಾಡಿದಂಥ ಎಲ್ಲಾ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಗಮನ ಕೊಟ್ಟು, ಕೇಳಿ ಉತ್ತರ ಕೊಡುವ ಪರಿಸ್ಥಿತಿಯಲ್ಲಿರಲಿಲ್ಲ. ಅದಕ್ಕಾಗಿ ನಾನು ವಿಷಾದ ಪಡುತ್ತೇನೆ. ಅವರು ಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕದ್ದು ೩೯ ಎಕರೆ ಜಮೀನನ್ನು ರೈತರ ಕಡೆಯಿಂದ ಸ್ವಾಧೀನಪಡಿಸಿಕೊಂಡು ಕೆಲವೊಂದು ಸಂಸ್ಥೆಗೆ ಅವ್ಯವಹಾರಿಕವಾಗಿ ಕೊಟ್ಟಿದೆ, ಇದರಲ್ಲಿ ದುರ್ವ್ಯವಹಾರ ನಡೆದಿದೆ ಎಂಬ ಆಪಾದನೆ ಮಾಡಿದ್ದಾರೆ. ಒಬ್ಬ ವ್ಯಕ್ತಿಗೆ ೧೨ ಎಕರೆ ಜಮೀನನ್ನು ಕೊಟ್ಟಿರುವುದೂ ಸಕ್ರಮವಾಗಿಲ್ಲ ಎಂದು ಹೇಳಿದ್ದಾರೆ. ಹಿಂದಿನ ಪ್ರವಾಸೋದ್ಯಮ ಮಂತ್ರಿಗಳು ಈ ಜಮೀನಿನಲ್ಲಿ ಯಾವುದೇ ಕಟ್ಟಡಗಳನ್ನಾಗಲೀ ಹೋಟೆಲ್‌ಗಳನ್ನಾಗಲೀ ಕಟ್ಟುವುದಕ್ಕೆ ಆಗುವುದಿಲ್ಲ ಪ್ರವಾಸೋದ್ಯಮ ಇಲಾಖೆಗೆ ಬಿಡಬೇಕು ಎಂದು ತನಿಖೆ ಮಾಡಿ ಬರೆದಿರತಕ್ಕ ಕಡತಗಳು ನನ್ನ ಪತ್ತಿರ ಇವೆ.

ಆದರ ಬಗ್ಗೆ ಕೂಡ ಅವರು ಏನು ಆಪಾದನೆ ಮಾಡಿದ್ದಾರೆ ಅದು ನಿರಾಧಾರವಾಗಿರತಕ್ಕಂಥದ್ದು. ಯೂನಿವರ್ಸಲ್ ರಿಸಾರ್ಟ್, ಬಾಂಬೆ ಈ ಕಂಪನಿಗೆ ಸುಮಾರು ೧.೧೨ ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದೀರಿ. ಆದರೆ ಇದನ್ನು ತನಿಖೆ ಮಾಡಲಾಗಿ ೧.೧೨ ಲಕ್ಷ ರೂಪಾಯಿಗಳಿಗೆ ಒಪ್ಪಂದ ಆಗಿರತಕ್ಕಂಥದ್ದು ನಿಜ ಇದೆ. ಆದರೆ ಎಷ್ಟು ಎಕರೆ ಜಮೀನನ್ನು ಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ನಿರ್ಣಯವಾಗಿಲ್ಲ. ಅದರ ಮುಂದೆ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ. ನಾನು ಈ ಖಾತೆಯ ಅಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಪೂರ್ವದಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಆಡಳಿತ ಮಂಡಲಿಯವರು ಒಪ್ಪಿಗೆ ಕೊಟ್ಟಿದ್ದಾರೆ, ಅನಂತರ ಬೇಕಾಗಿರತಕ್ಕಂತಹ ಕರಡು ಒಪ್ಪಿಗೆ ಕೂಡ ಆಗಿದೆ. ಆದರೆ ಎಷ್ಟು ಎಕರೆ ಜಮೀನನ್ನು ಕೊಡಬೇಕು ಎನ್ನತಕ್ಕಂತಹದ್ದರ ಬಗ್ಗೆ ನಿರ್ಣಯವಾಗಿಲ್ಲ. ಆದರೆ ನಿರ್ಣಯವನ್ನು ಕೂಡ ಮುಂದೆ ಕೈಗೊಳ್ಳತಕ್ಕಂಥದ್ದು ಇದೆ. ಇದರ ಜೊತೆಗೆ ಬಾಂಬೆಯಲ್ಲಿರತಕ್ಕ ಇನ್ನೊಂದು ಕಂಪನಿಗೆ ಸುಮಾರು ೫.೫ ಲಕ್ಷ ರೂಪಾಯಿಗಳಿಗೆ ಇಂಟರ್ನ್ಯಾಷನಲ್ ಹೋಟೆಲ್ ಅಥವಾ ಪಂಚತಾರಾ ಹೋಟೆಲ್ ಕಟ್ಟುವುದು ಇದ್ದರೆ ನೀವು ಅದನ್ನು ೫.೫೦ ಲಕ್ಷ ರೂಪಾಯಿಗಳಿಗೆ ಒಂದು ಎಕರೆಯಂತೆ ಕೊಡುವ ವ್ಯವಹಾರ ಮಾಡಿದ್ದೀರಿ ಆದರಲ್ಲಿ ಸುಮಾರು ೭೦ ಸಾವಿರ ರೂಪಾಯಿಗಳು ದುರ್ವ್ಯವಹಾರವಾಗಿದೆ. ಮೆಸರ್ಸ್ ಮೆಕರ್ಸ್ ಡೆವಲಪ್‌ಮೆಂಟ್ ಸರ್ವಿಸ್ ಕಂಪನಿ ಪ್ರೈವೇಟ್ ಲಿಮಿಟೆಡ್ ಈ ಸಂಸ್ಥೆಯ ಜೊತೆಗೆ ದುರ್ವ್ಯವಹಾರ ಆಗಿದೆ ಎನ್ನತಕ್ಕಂತಹ ವಿಷಯದ ಬಗ್ಗೆಯೂ ಅವರ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ತಮ್ಮ ಮೂಲಕ ಈ ಸದನಕ್ಕೆ ಅರಿಕೆ ಮಾಡಿಕೊಳ್ಳತಕ್ಕಂತಹದ್ದು ಏನೆಂದರೆ, ೩.೫೦ ಲಕ್ಷ ರೂಪಾಯಿಗಳನ್ನು ಈ ತರಹ ಇಂಟರ್ ನ್ಯಾಷನಲ್ ಹೋಟೆಲನ್ನು ಕಟ್ಟುವುದಕ್ಕೆ ಕೊಟ್ಟಿರತಕ್ಕಂಥಹದ್ದು ಸಂಳ್ಳು. ಅದು ಇನ್ನೂ ಮಾತುಕತೆಯ ಹಂತದಲ್ಲಿದೆ. ಇದರ ಬಗ್ಗೆ ಯಾವುದೇ ತರಹದ ನಿರ್ಣಯವನ್ನು ಆ ಸಭೆಯಲ್ಲಿ ತೆಗೆದುಕೊಂಡಿಲ್ಲ. ಮೆಸರ್ಸ್ ಮೇಕರ್ಸ್ ಪ್ರೈವೇಟ್ ಕಂಪನಿಯವರು ಪಂಚತಾರಾ ಹೋಟೆಲ್ ಉದ್ಯಮದಲ್ಲಿ ಸಾಕಷ್ಟು ಪರಿಣತರಾಗದೆ ಇರತಕ್ಕಂಥದ್ದು, ಅನುಭವ ಇಲ್ಲದೇ ಇರತಕ್ಕಂಥಹದ್ದು ಎಂಬ ಆಭಿಪ್ರಾಯ ಇರುವುದರಿಂದ, ಭಾರತ ಪ್ರವಾಸೋದ್ಯಮ ನಿಗಮದವರಾಗಲೀ ಅಥವಾ ಬೇರೆ ಪಂಚತಾರಾ ಹೋಟೆಲ್‌ನ್ನು ನಡೆಸತಕ್ಕಂಥವರು, ಅಥವಾ ಹೋಟೆಲ್ ಉದ್ಯಮಕ್ಕೆ ಸಂಬಂಧಪಟ್ಟವರ ಜೊತೆ ಮಾತನಾಡಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕಂಥದ್ದು ಇಗತ್ಯ ಇದೆ ಎನ್ನುವ ವಿಷಯ ಪ್ರಸ್ತಾವವಾಗಿರುವುದರಿಂದ, ಆ ಸಭೆಯಲ್ಲಿ ಆ ಬಗ್ಗೆ ನಿರ್ಣಯವಾಗಿಲ್ಲ. ಮಾನಗೆ ಯಾವುದೇ ನಿರಾಧಾರ ಜಮೀನು ಕೊಡತಕ್ಕಂಥಹದ್ದರ ಬಗ್ಗೆ ಒಪ್ಪಂದವಾಗಿಲ್ಲ. ಆದ್ದರಿಂದ ಅವರ ಈ ಆಪಾದನೆ

ಗಳು ಎಂದು ಹೇಳುತ್ತೇನೆ. ಅವರು ಉಳಿದಿರತಕ್ಕ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರಮೋಷನ್ ಕೊಟ್ಟಿರತಕ್ಕಂಥಹದ್ದು, ಕೆಲವರನ್ನು ಅಮಾನತ್ತಿನಲ್ಲಿ ಇಟ್ಟಿರತಕ್ಕಂಥಹದ್ದು, ಈ ವಿಷಯಗಳ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಇದು ಸರ್ಕಾರವ ಗಮನಕ್ಕೆ ಕೂಡ ಬಂದಿದೆ. ಇದರ ಬಗ್ಗೆ ನಾನು ಇಷ್ಟು ಮಾತ್ರ ಈ ಸಭೆಯಲ್ಲಿ ಹೇಳಂತ್ತಿದ್ದೇನೆ. ನಾನು ಈ ಬಗ್ಗೆ ಉತ್ತರ ಕೊಡ ಬೇಕಾಗಿದ್ದರೆ, ಸೇವಾ ನಿಯಮಾವಳಿಗಳನ್ನು ಪರಿಶೀಲನೆ ಮಾಡಬೇಕಾದದು ಇದೆ. ಕೆಲವು ಅನ್ಯಾಯ ವಾಗಿರತಕ್ಕಂಥಹದ್ದು. ಅಮಾನತಿನಲ್ಲಿಟ್ಟಿರತಕ್ಕಂಥಹದರ ಬಗ್ಗೆ ನಮಗೂ ನೇರವಾಗಿ ದೂರುಗಳು ಬಂದಿವೆ ಆ ಬಗ್ಗೆ ವರದಿಗಳನ್ನು ಕೊಟ್ಟಿರತಕ್ಕ ಸಂದರ್ಭಗಳೂ ಇವೆ. ಇದರ ಬಗ್ಗೆ ವರದಿಯನ್ನು ಕೊಡಬೇಕು. ಎಂದು ಇಲಾಖೆಯ ಕಾರ್ಯದರ್ಶಿಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಬರೆದಿರತಕ್ಕಂಥದ್ದು ಇದೆ ಕಳೆದ ಬಾರಿ ಆಡಳಿತ ಮಂಡಲಿಯಲ್ಲೂ ಇದು ಚರ್ಚೆ ಶ್ರೀಪಾನ್ ಲಕ್ಕಪ್ಪನವರು ಎತ್ತಿರತಕ್ಕದ್ದು ಸೇವಾ ನಿಯಮಾವಳಿಗಳಲ್ಲಿ ಆಗಿರತಕ್ಕ ಉಲ್ಲಂಘನೆಗಳು ಯಾಗಿದೆ. ಮತ್ತು ಕೆಲವರಿಗೆ ಅನ್ಯಾಯವಾಗಿ ಆಗಿರತಕ್ಕ ಭಡ್ತಿಯಾಗಿರಬಹುದು, ಅಥವಾ ಹಿಂಬಡ್ತಿ ಯಾಗಿರಬಹುದು, ಕೆಲವರನ್ನು ಅಮಾನತ್ತಿನಲ್ಲಿಟ್ಟಿರಬಹುದು, ಇವೆಲ್ಲವುಗಳ ಬಗ್ಗೆ ತಕ್ಷಣವೇ ಅದಕ್ಕೆ ಸಂಬಂಧಪಟ್ಟಿರತಕ್ಕ ಇಲಾಖೆಯು ಕಾಗದ ಪತ್ರಗಳನ್ನು ಹಾಗೂ ಕಡತಗಳನ್ನು ನೇರವಾಗಿ ಕಳುಹಿಸಿ ಕೊಡಬೇಕೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಪರಿಶೀಲನೆ ಮಾಡಿ ಅದಕ್ಕೆ ಸೂಕ್ತವಾದ ಆದೇಶ ವನ್ನು ಕಳುಹಿಸಿಕೊಡುತ್ತೇನೆ. ಏಕೆಂದರೆ ನಾನು ಇಲ್ಲಿ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಸೇವಾ ನಿಯಮಾವಳಿಗಳಿಗೆ ಸಂಬಂಧಪಟ್ಟಿರತಕ್ಕಂಥದು ಏನು ಎನ್ನುವುದು ನಮಗೆ ಗೊತ್ತಿಲ್ಲ. ಅದು ಕಂಪನಿಯಾಗಿ ಪರಿವರ್ತನೆಗೊಂಡಿರುವುದರಿಂದ, ನೇರವಾಗಿ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಬೇಕಾಗಿರತಕ್ಕಂಥ ವರದಿಯನ್ನು ತರಿಸಿಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆಯೇ ವಿನಹ ಅದಕ್ಕೆ ಸಂಬಂಧಪಟ್ಟಿರತಕ್ಕಂತಹ ಕಡತಗಳನ್ನು ಪರಿಶೀಲನೆ ಆಫ್ಲೈ ಮಾಡತಕ್ಕ ಅಧಿಕಾರ ಇಲ್ಲದೇ ಇರುವುದರಿಂದ ನಾವು ಇದಕ್ಕಾಗಿ ವಿಚಾರಣೆಯನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಅಂದರೆ ಕಾರ್ಯದರ್ಶಿಗಳಿಂದ ಆಗಬಹುದು, ಅಥವಾ ಇನ್ನಾವುದೇ ಅಧಿಕಾರಿಯ ಮೂಲಕವಾಗಿಯಾದರೂ ಸಂಬಂಧಪಟ್ಟ ಕಡತವನ್ನು ದಾಖಲೆಗಳನ್ನು ನಾನೇ ವೈಯಕ್ತಿಕವಾಗಿ ತರಿಸಿಕೊಂಡು ಅದಕ್ಕೆ ಆಗಿರತಕ್ಕ ಒಂದು ವೇಳೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುತ್ತೇವೆ ಇಲ್ಲದಿದ್ದರೆ ಸದನಕ್ಕೆ ಬಂದು ಸರಿಯಾಗಿರ ತಕ್ಕ ಮಾಹಿತಿಯನ್ನು ಉತ್ತರ ರೂಪದಲ್ಲಿ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ಇಲ್ಲಿ ೭ ಎಕರೆ ಪ್ರದೇಶವನ್ನು ಪಂಚತಾರಾ ಹೋಟೆಲ್ ಅನ್ನು ಕಟ್ಟತಕ್ಕಂತಹದ್ದರ ಬಗ್ಗೆ ಬೋರ್ಡ್ ರೆಸಲ್ಯೂಷನ್ ಆಗಿದೆ. ಆ ಜಮೀನನ್ನು ಲೀಸ್ ಮೇಲೆ ಕೊಡಬೇಕಾಗಿದ್ದರೆ ಅಲ್ಲಿನ ಛೇರ್ಮನ್ ಮತ್ತು ಎಂ. ಡಿ. ಇವರಿಬ್ಬರೂ ಸೇರಿ ಸಾಕಷ್ಟು ಜಾಹಿರಾತನ್ನು ಕೊಟ್ಟು ಯಾರು ಹೈಯಸ್ಟ್ ಬಿಡ್ಡರ್ಸ್ ಇದ್ದಾರೋ ಅವರಿಗೆ ಕೊಡಬೇಕು ಎಂದು ಇದೆ. ಅದರ ಬಗ್ಗೆ ಪತ್ರ ವ್ಯವಹಾರ ಮಾಡಿದ್ದಾರೆ. ಬಾಂಬೆಯಲ್ಲಿರುವ ಮೆಸರ್ಸ್ ಮೇಕರ್ಸ್ ಡೆವಲಪ್ ಮೆಂಟ್ ಸರ್ವೀಸ್ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರು ಪತ್ರ ಬರೆದಿದ್ದಾರೆ.

To Sri K. Srinivasan Managing Director, Karnataka State Tourism Development Corporation. ಇವರಿಗೆ ಬರೆದಿದ್ದಾರೆ. ಕೆ. ಎಸ್.ಟಿ ಡಿ ಸಿ.ಯ ಮೇನೇಜಿಂಗ್ ಡೈರೆಕ್ಟರ್ ಶ್ರೀನಿವಾಸನ್ ಅವರಿಗೆ ಬರೆದಿರತಕ್ಕ ಪತ್ರ ಈ ರೀತಿ ಇದೆ.

> "Land on lease available for international hotel at Air Port—Further to your meeting in Bangalore last week you had indicated that you would be away at Hampi and would not be avaible for discussion on finalisation of the agreement till 15th October after-noon You also indicated that you will not be available on 15th and 17th October. Under the circumstances..."

ಶ್ರೀ ಡಿ. ಟಿ. ಜಯಕುಮಾರ್.— ಅವರು ಓದುತ್ತಾ ಇರತಕ್ಕ ಇಲಾಖೆಯ ಪತ್ರ ಅವರ ಹತ್ತಿರ ಹೇಗೆ ಬಂತು ? ಅದು ಕಾನ್ಫಿಡೆನ್ಸಿಯಲ್ ಪತ್ರ ಇದ್ದು ಇವರ ಹತ್ತಿರ ಹೇಗೆ ಬಂತು ಎಂಬುದನ್ನು

ಮಾನ್ಯ ಸದಸ್ಯರು ಹೇಳಬೇಕು. (ಗೊಂದಲ) ಇಲ್ಲಿ ಅದನ್ನು ಡಿಫೆಂಡ್ ಮಾಡಿಕೊಳ್ಳಲು ಅಧಿಕಾರಿಗಳು ಇಲ್ಲ. ಅವರಿಗೆ ಮಾತನಾಡಲು ಅವಕಾಶ ಇಲ್ಲದೇ ಇರುವ ಸಂದರ್ಭದಲ್ಲಿ ಅದನ್ನು ಅವರು ಓದುವುದು ಕಾನೂನು ಬಾಹಿರವಾಗಿರುತ್ತದೆ. ಇದು ತರವಲ್ಲ.....

(ಗೊಂದಲ)

SRI B. LAKKAPPA.— Under the circumstances.....

ಅಧ್ಯಕ್ಷರು.— ತಾವು ವಿವರಣೆಯನ್ನು ಮಾತ್ರ ಕೇಳಿ

ಶ್ರೀ ಬಿ. ಲಕ್ಕಪ್ಪ.— ಈ ರೀತಿ ಅಗ್ರಿಮೆಂಟ್ ಆಗಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಡಿ, ಟಿ. ಜಯಕುಮಾರ್.— ಆ ಪತ್ರ ಅವರಿಗೆ ಹೇಗೆ ಬಂತು ? ಹೇಗೆ ಅವರು ಅದನ್ನು ಪಡೆದುಕೊಂಡಿದ್ದಾರೆ ? ಒಳ್ಳೆಯ ಅಧಿಕಾರಿಗಳ ಮೇಲೆ ಗೂಬೆ ಕೂಡಿಸತಕ್ಕದ್ದು ಬೇಡ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.— ಪೋಲೀಸ್ ಇಲಾಖೆಯಲ್ಲಿ ಇದ್ದವರು ಅವರು.....

(ಗೊಂದಲ)

ಡಿಸ್‌ಮಿಸ್ ಆಗುವುದಕ್ಕಿಂತಲೂ ಮುಂಚೆ ಯಾವ ಇಲಾಖೆಯಲ್ಲಿ ಇದ್ದರು ಎಂದು ಕೇಳಿ.....

(ಗೊಂದಲ)

"Finalistion and signing, etc., would require a minimum of two days. I am inclined to come to Bangalore on Monday, 19th October, 87 so that we can have two full days at our disposal. I shall be in Bangalore in the morning of 19th October, 87...

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೇ, ಮತ್ತೆ ಅವರು ಓದಲು ತಾವು ಅನುಮತಿಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು.—ವಿವರಣೆ ಕೇಳಿ. ತಾವು ಅದನ್ನು ಓದುವುದು ಬೇಡ. ಇಲ್ಲದಿದ್ದರೆ ನಾನು ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡಬೇಕಾಗುತ್ತದೆ.

ಶ್ರೀ ಬಿ. ಲಕ್ಕಪ್ಪ.—ಶೆರಾಟನ್ ಹೋಟೆಲಿಗೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಟೆಂಡರ್ ಕರೆಯುವುದರಲ್ಲಿ ಇದು ಎಲ್ಲಾ ಪತ್ರಿಕೆಗಳಲ್ಲಿ ಪಬ್ಲಿಕ್‌ಸಿಟಿ ಆಗಿಲ್ಲ. ಕಿರಲ್ಲಿ ಇಬ್ಬರನ್ನು ಇಎಂಡಿ ಕೊಟ್ಟಿಲ್ಲ ಎಂದು ರಿಜೆಕ್ಟ್ ಮಾಡಿದ್ದು ಇನ್ನೊಂದೇ ಒಂದು ಉಳಿದಿದ್ದನ್ನು ಏಕೆ ಇವರು ರಿಜೆಕ್ಟ್ ಮಾಡಿಲ್ಲ ? ಮತ್ತೆ ಇದಕ್ಕೆ ನಾವು ಒಪ್ಪಿಕೊಂಡಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಆದರೆ ನಾವು ಬಂದು ಕಾಣುತ್ತೇವೆಂದು ಅವರು ಪತ್ರ ಬರೆದಿದ್ದಾರೆ. ವೇನೇಜಿಂಗ್ ಡೈರೆಕ್ಟರಿಗೂ, ಅವರಿಗೆ ಪತ್ರ ವ್ಯವಹಾರ ನಡೆದಿದೆ. ಸಚಿವರು ಈ ಬಗ್ಗೆ ಸಾಕಷ್ಟು ವಿಚಾರಣೆ ನಡೆಸಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ವೇಕರ್ಸ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನವರು ಪಂಚತಾರಾ ಹೋಟೆಲ್‌ನ್ನು ಕಟ್ಟಲು ಜಾಗವನ್ನು ಕೊಡುವುದರಲ್ಲಿ ಪತ್ರ ವ್ಯವಹಾರ ಆಗಿದೆ ಮತ್ತು ಪತ್ರಿಕೆಗಳಲ್ಲಿ ಟೆಂಡರ್ ಕರೆಯುವ ಸಂದರ್ಭದಲ್ಲಿ ೩ ಟೆಂಡರ್‌ಗಳು ಬಂದಿದ್ದು ೨ ಟೆಂಡರ್‌ಗಳು ತಿರಸ್ಕೃತವಾಗಿದ್ದು ಉಳಿದ ಇನ್ನೊಂದನ್ನು ಏತಕ್ಕೆ ತಿರಸ್ಕಾರ ಮಾಡಿಲ್ಲ ಎನ್ನುವ ತಮ್ಮ ಅನುಮಾನವನ್ನು, ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಹೊಂದಾಣಿಕೆಗೆ ಬಂದಿಲ್ಲ. ಕಳೆದ ಆಡಳಿತ ಮಂಡಲಿಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ವೇಕರ್ಸ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಎನ್ನುವವರು ಹೋಟೆಲ್ ಉದ್ಯಮದಲ್ಲಿ ಅನುಭವ ಇರುವ ವ್ಯಕ್ತಿಗಳು ಇಲ್ಲವಾದ್ದರಿಂದ ಅವರೊಬ್ಬರಿಗೇ ಇದನ್ನು ಕೊಡುವುದು ಸರಿಯಾಗುವುದಿಲ್ಲ. ಆದುದರಿಂದ ಸಂಬಂಧಪಟ್ಟ ಉದ್ಯಮದಲ್ಲಿ ಇರುವವರೆಲ್ಲಾ ಇದರಲ್ಲಿ ಭಾಗಿಗಳಾಗ

ಬೇಕು, ಅವರಿಗೆ ಪತ್ರ ಬರೆಯ ಬೇಕು ಎಂದು ಮತ್ತು ಪತ್ರಿಕೆಗಳಲ್ಲಿ ಜಾಹೀರು ಕೊಡಬೇಕೆಂದು ಆಗಿದೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮೆ : ಮೇಕರ್ಸ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಎನ್ನತಕ್ಕ ಈ ಜನರಿಗೆ ಏಳು ಎಕರೆ ಜಮೀನು ಕೊಡತಕ್ಕ ನಿರ್ಣಯ ಆಗಿಲ್ಲ. ಮತ್ತೆ ಮೂರೂವರೆ ಲಕ್ಷ ರೂಪಾಯಿಗೆ ಗುತ್ತಿಗೆ ಕೊಡುವುದಕ್ಕೆ ನಿರ್ಣಯ ಆಗಿಲ್ಲ. ಮಾನ್ಯ ಸದಸ್ಯರು ಕಡತ ವ್ಯವಹಾರದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಕಡತ ತರಿಸಿ ನೋಡಬೇಕಾಗುತ್ತದೆ. ನಾನು ಕಡತವನ್ನು ತರಿಸಿ ಪರಿಶೀಲನೆಗೆ ಹೀಗೆ ಮಾಡಿದ್ದಾರೆಂಬುದನ್ನು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇಷ್ಟು ಮಾತ್ರ ನಿಜ, ಅವರಿಗೆ ಜಮೀನು ಕೊಡತಕ್ಕ ವ್ಯವಹಾರದಲ್ಲಿ ಹೇಳುವುದಾದರೆ ಯಾವುದೇ ಜಮೀನು ಕೊಟ್ಟಿಲ್ಲ.

ಶ್ರೀ ಬಿ ಲಕ್ಕಪ್ಪ.—ಪ್ರವಾಸೋದ್ಯಮ ನಿಗಮದಲ್ಲಿ ರಸೀದ್ ಎನ್ನುವವರಿಗೆ ಆರು ತಿಂಗಳಲ್ಲಿ ಮೂರು ಪ್ರಮೋಷನ್ ಕೊಟ್ಟಿದ್ದಾರೆ. ಕಾರಣ ಏನೆಂದರೆ ಒಂದು ಪತ್ರ ಬರೆದಿದ್ದಾರೆ.....

ಅಧ್ಯಕ್ಷರು.—ನೀವು ನೇರವಾಗಿ ಪ್ರಶ್ನೆಯನ್ನು ಕೇಳಿ. ಪತ್ರಗಳನ್ನು ಹುಡುಕಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್.—ಅನೇಕ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಡ್ತಿ ಕೊಟ್ಟಿರತಕ್ಕ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸೇವಾ ನಿಯಮಾವಳಿ ಬಗ್ಗೆ ನಿನ್ನೆ ಸಹ ಪ್ರಸ್ತಾಪ ಮಾಡಿದ್ದಾರೆ. ಇನ್ನು ಅನೇಕ ವಿಷಯಗಳನ್ನು ಹೇಳಿದ್ದಾರೆ. ಇಲಾಖೆಯಲ್ಲಿ ಕಾಗದ ಪತ್ರಗಳನ್ನು ಸಂಬಂಧಪಟ್ಟ ದಾಖಲೆಗಳನ್ನು ತರಿಸಿ ನೋಡಬೇಕಾಗುತ್ತದೆ. ಪ್ರವಾಸೋದ್ಯಮ ನಿಗಮ ಅದು ಕಂಪನಿ, ಅದು ಕಂಪನಿಯಾಗಿರುವುದರಿಂದ ಅವರು ಯಾವುದೇ ಕಡತಗಳನ್ನು ನಮಗೆ ಕಳುಹಿಸಿ ಕೊಡುವುದಿಲ್ಲ. ನೀವು ಕೊಟ್ಟಿರತಕ್ಕ ವಿಪರಗಳ ಬಗ್ಗೆ ಸೆಕ್ಷನ್ ಒಳಗೆ ಸರ್ಕಾರ ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಲಿಕ್ಕೆ ಆ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿಕ್ಕೆ ಸಾಧ್ಯವಿದೆ. ನಿನ್ನೆ ಪ್ರಸ್ತಾಪ ಮಾಡಿದಂತಹ ವಿಷಯಗಳ ಬಗ್ಗೆ ಇಲಾಖೆಯಿಂದ ಉತ್ತರವನ್ನು ತರಿಸಿಕೊಂಡು ನೋಡಿದಾಗ ನನಗೆ ಸಮಂಜಸವಾದ ಉತ್ತರ ಇದೆಯೆಂದು ಕಾಣಲಿಲ್ಲ. ಸದನದ ಮೂಲಕ ಈಗ ಆಶ್ವಾಸನೆ ಕೊಡುತ್ತೇನೆ, ಬಡ್ತಿ ವಿಚಾರದಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದಾರೆಯೇ ಪಾಲನೆ ಮಾಡಿದ್ದಾರೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆ ಬಗ್ಗೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ಸೆಕ್ಷನ್ ಒಳಗೆ ಕೆಳಗೆ ಸರ್ಕಾರ ತರಿಸಿಕೊಳ್ಳಬಹುದು, ಕಡತಗಳನ್ನು ತರಿಸಿಕೊಂಡು ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಚರ್ಚೆ ಮತ್ತು ಉತ್ತರ ಇಲ್ಲಿಗೆ ಮುಕ್ತಾಯವಾಯಿತು. ಈಗ ತೆಲುಗುಗಂಗಾ ಯೋಜನೆಯ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಬಿ. ಲಕ್ಕಪ್ಪ.—ಈ ತರಹ ಅನ್ಯಾಯಗಳು ಏನಾದರೂ ಆಗಿದ್ದರೆ ಇದನ್ನು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಗೆ ಪತಕ್ಕೆ ರೆಫರ್ ಮಾಡಬಾರದು.

ಶ್ರೀ ಎಂ.ಪಿ ಪ್ರಕಾಶ್.—ಸರ್ಕಾರಕ್ಕೆ ಈ ವಿಷಯ ಸಂಬಂಧಪಟ್ಟಹಾಗೆ ಯಾವುದೇ ವಿಚಾರವನ್ನು ಮುಚ್ಚಿಡುವುದಕ್ಕೆ ಇಷ್ಟವಿಲ್ಲ. ಇಷ್ಟು ಆಶ್ವಾಸನೆ ಕೊಡುತ್ತೇನೆ. ಭೂಮಿಯನ್ನು ಯಾರಿಗೂ ಕೊಟ್ಟಿಲ್ಲ. ಸೇವಾ ನಿಯಮಾವಳಿಗಳಲ್ಲಿ ಆಗಿರತಕ್ಕ ಅನ್ಯಾಯಗಳನ್ನು ಸರಿಪಡಿಸಲಿಕ್ಕೆ ಸಾಧ್ಯವಿದೆ. ಏನಾಗಿದೆ ಎಂಬುದನ್ನು ನೋಡಿ ಸದನಕ್ಕೆ ವಿವರ ಕೊಡುತ್ತೇನೆ. ಆ ಬಗ್ಗೆ ಸಂಪೂರ್ಣ ತೃಪ್ತಿಯಾಗುವ ಹಾಗೆ ಸದನಕ್ಕೆ ವಿಷಯವನ್ನು ತಿಳಿಸುತ್ತೇನೆ.